ಮೇಲೆ ತಿಳಿಸಿದ ಎಲ್ಲಾ ಸೌಲಭ್ಯಗಳನ್ನು ಪ್ರವಾಸೋದ್ಯಮ ಇಲಾಖೆಯು ದಿ: 21-8-91 ರಂದು ಲೋಕೋಪಯೋಗಿ ಇಲಾಖೆಯಿಂದ ವಶಕ್ಕೆ ತೆಗೆದುಕೊಂಡಿದೆ. ಪ್ರವಾಸೋದ್ಯಮ ಇಲಾಖೆಯು ರಾಜ್ಯದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿರುವ ಪ್ರವಾಸಿ ಸೌಲಭ್ಯಗಳನ್ನು ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಲು ಅಥವಾ ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಸರ್ಕಾರ ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಂಡ ಕೂಡಲೇ ಶ್ರೀ ಸೋಗಲ ಕ್ಷೇತ್ರದಲ್ಲಿ ನಿರ್ಮಿಸಿರುವ ಪ್ರವಾಸೀ ಸೌಲಭ್ಯಕ್ಕೆ ಪೀಠೋಪಕರಣಗಳನ್ನು ಒದಗಿಸಲು ಹಾಗೂ ಜವಾನನನ್ನು ನೇಮಿಸುವ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(4) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಚಂದಾಪುರದಲ್ಲಿ ಬಸಿಯುವ ಕೆರೆ ದುರಸ್ತಿ

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ:-(ಸೇಡಂ):- ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಚಂದಾಪುರ ಬಸಿಯುವ ಕೆರೆಯನ್ನು 88ನೇ ಸಾಲಿನಲ್ಲಿ ಭೂ ಸೇನಾ ನಿಗಮದವರು ನಿರ್ಮಿಸಿ, ಕೋಡಿ ಇತ್ಯಾದಿ ಕೆಲಸ ಪೂರ್ತಿಯಾಗದೇ ಜಿಲ್ಲಾ ಪರಿಷತ್ತಿನ ಸ್ವಾಧೀನಕ್ಕೆ ಒಪ್ಪಿಸುವ ಮೊದಲನೇ ಒಂದೇ ಒಂದು ವರ್ಷದೊಳಗಾಗಿ ಒಡೆದುಹೋಗಿರುವುದು ದುರಸ್ಥಿ ಮಾಡದೇ ಬಿಟ್ಟಿದ್ದನ್ನು ದುರಸ್ತಿಗಾಗಿ ನಾನು ಸದನದಲ್ಲಿ ಪ್ರಶ್ನೆ ಕೇಳಿದರೆ 45 ನೇ ಅಧಿವೇಶನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 164 ಕ್ಕೆ ಜಿಲ್ಲಾಪರಿಷತ್ ಸ್ವಾಧೀನಕ್ಕೆ ವಹಿಸಿದರೆ ಮಾತ್ರ ಜಿಲ್ಲಾ ಪರಿಷತ್ತಿನ ಅಪ್ಪಣೆಗಾಗಿ ಕಾಯಬೇಕಾಗುತ್ತಿದ್ದು ಇಲ್ಲವೆ, ಭೂಸೇನಾ ನಿಗಮದವರು ಒಂದು ಗುತ್ತೆದಾರರಂತೆ ಅವರು ಸಹ ನಿರ್ಮಾಣ ಏಜೆಂಟರಲ್ಲವೆ ? ಗುತ್ತೆದಾರರು ಕೆಲಸ ಮಾಡುವಾಗ ಆ ಕೆಲಸದಲ್ಲಿ ಏನಾದರೂ ಅನಾಹುತವಾದರೆ ಆ ಗುತ್ತೆದಾರರು ಜವಾಬ್ದಾರರಲ್ಲವೆ? ಅದಕ್ಕಾಗಿಯೇ ಜಿಲ್ಲಾ ಪರಿಷತ್ತಿನ ಅಪ್ಪಣೆಗಾಗಿ ಕಾಯುತ್ತಿದ್ದೇವೆ ಎಂಬುದು ಏಕೆ ?

ಲಕ್ಷಗಟ್ಟಲೇ ಹಣ ಖರ್ಚಾಗಿ ಇದರಿಂದ ರೈತರಿಗೆ ಯಾವ ಪ್ರಕಾರ ಲಾಭ ಇಲ್ಲದಂತಾಗಿದ್ದು ನಿಜವಲ್ಲವೆ ? ಇದನ್ನು ನಿಗಮದಿಂದ ದುರಸ್ತಿ ಮಾಡಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ರಮೇಶ್:-(ಯುವಜನ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರ ಪರವಾಗಿ ಉತ್ತರವನ್ನು ನೀಡುತ್ತೇನೆ. ಕೇಂದ್ರ ಪುರಸ್ಕೃತ ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮದ ಮೂಲ ಉದ್ದೇಶ ನೈಸರ್ಗಿಕ ಸಮತೋಲನವನ್ನು ಕಾಪಾಡುವುದು ಮತ್ತು ಆ ಪ್ರದೇಶವನ್ನು ಬರಗಾಲ ಮುಕ್ತವಾಗಿ ಮಾಡುವುದೇ ಆಗಿದೆ. ಈ ಪ್ರದೇಶದ ಸಂಪೂರ್ಣ ಅಭಿವೃದ್ಧಿಗಾಗಿ ಸಮಗ್ರ ಜಲಾನಯನ ಮಾರ್ಗವನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮಾರ್ಗಸೂಚಿ ಅನ್ವಯ ಸಣ್ಣ ನೀರಾವರಿ ವಿಭಾಗದಲ್ಲಿ ಪ್ರತಿಯೊಂದು ಕೆಲಸದ ಥೋಜನಾ ವೆಚ್ಚ ರೂ. 5.00 ಲಕ್ಷಕ್ಕೆ ಮೀರಿರಬಾರದು.

ಈ ಕಾರ್ಯಕ್ರಮದ ರೀತ್ಯಾ ಒಂದು ತಾಲ್ಲೂಕಿಗೆ ಅದರ ಭೌಗೋಳಿಕ ವಿಸ್ತೀರ್ಣವನ್ನು ಅವಲಂಬಿಸಿ ರೂ. 15.00 ಲಕ್ಷದಿಂದ ರೂ. 18.50 ಲಕ್ಷಗಳನ್ನು ಅನುದಾನವಾಗಿ ಒಂದು ವರ್ಷಕ್ಕೆ ಒದಗಿಸಲಾಗುವುದು. ಈ ಕಾರ್ಯಕ್ರಮದ ಅಡಿಯಲ್ಲಿ ಭೂ ಅಭಿವೃದ್ಧಿ, ಅರಣ್ಯೀಕರಣ, ಸಣ್ಣ ನೀರಾವರಿ, ತೋಟಗಾರಿಕೆ, ಪಶು ಸಂಗೋಪನೆ, ರೇಷ್ಮೆ ಹಾಗೂ ಮೀನುಗಾರಿಕೆ ವಿಭಾಗಗಳ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ಈ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನವು 50:50 ದಾಮಾಶಯದಲ್ಲಿರುತ್ತದೆ.

ಈ ಕಾರ್ಯಕ್ರಮವು ಗುಲ್ಬರ್ಗಾ ಜಿಲ್ಲೆಯ ಆಳಂದ್, ಅಫಜಲ್‌ಪುರ, ಚಿತಾಪೂರ, ಗುಲ್ಬರ್ಗಾ, ಸೇಡಂ, ಶಹಾಪುರ, ಶೋಲಾಪುರ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಜಾರಿಯಲ್ಲಿದೆ. ಗುಲಬರ್ಗಾ ಜಿಲ್ಲೆಗೆ

1991-92ನೇ ಸಾಲಿಗೆ ರೂ 144.20 ಲಕ್ಷಗಳ ಅನುದಾನವನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ. ಈ ಪೈಕಿ ಈಗಾಗಲೇ ರೂ. 108.150 ಲಕ್ಷಗಳನ್ನು ಆ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ, 1992 ರ ಅಂತ್ಯದವರೆಗೆ ರೂ. 83.641 ಲಕ್ಷಗಳನ್ನು ಜಿಲ್ಲೆಯಲ್ಲಿ ಖರ್ಚು ಮಾಡಲಾಗಿದೆ.

ಸೇಡಂ ತಾಲ್ಲೂಕಿನ ಚಂದಾಪುರ ಜಿನಗು ಕೆರೆ ಕೆಲಸವನ್ನು 1985-86 ರ ಸಾಲಿನಲ್ಲಿ ಕೇಂದ್ರ ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮದಲ್ಲಿ 5 ಲಕ್ಷ ಅಂದಾಜು ಮೊಬಲಗಿನಲ್ಲಿ ಮಂಜೂರು ಮಾಡಲಾಗಿತ್ತು. ಸದರೀ ಕೆಲಸವನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಟ್ಟಿದ್ದು, 1986ರ ಮೇ ತಿಂಗಳಿನಲ್ಲಿ ಕೆಲಸ ಪ್ರಾರಂಭವಾಗಿ ಭೂ ಸ್ವಾಧೀನ ಕಾರಣಗಳಿಗಾಗಿ ಅನಿರೀಕ್ಷಿತವಾಗಿ ಕೆಲಸ ನಿಂತು ಹೋಯ್ತು. ಮತ್ತೆ ಕೆಲಸವು ನವೆಂಬರ್ 1987 ರಲ್ಲಿ ಪ್ರಾರಂಭವಾಗಿ 2-9-88 ರಲ್ಲಿ ವಿಪರೀತ ಮಳೆಯಿಂದಾಗಿ, ಪ್ರಕೃತಿ ವಿಕೋಪದಿಂದ ಕೆರೆಯ ತಗ್ಗು ಪ್ರದೇಶದ ದಂಡೆ ಒಡೆದುಹೋಯ್ತು

(5) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಅಳಿವೆ ದ್ವಾರದಲ್ಲಿ ತುಂಬಿಕೊಂಡಿದ್ದ ಹೂಳನ್ನು ತೆಗೆಯುವ ಬಗ್ಗೆ.

ಶ್ರೀ ವಿಜಯಕುಮಾರ್ ಶೆಟ್ಟಿ:- (ಸೂರತ್ಕಲ್):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಅಳಿವೆ ದ್ವಾರದಲ್ಲಿ ಹೂಳು ತುಂಬಿಕೊಂಡು ಪ್ರತಿವರ್ಷ ಮಳೆಗಾಲದ ಪ್ರಾರಂಭದಲ್ಲಿ ಅನೇಕ ದೋಣಿಗಳು ಅಪಘಾತಕ್ಕೀಡಾಗಿ ಮೀನುಗಾರರು ಜೀವ ಕಳೆದುಕೊಳ್ಳುತ್ತಿರುವುದು ವಾರ್ಷಿಕ ಕ್ರಿಯೆಯಾಗಿದೆ. ಸಮುದ್ರ ತೀರದಲ್ಲಿ ಹೂಳೆತ್ತಲು ಕೇರಳ ಮಾದರಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನಿರಂತರ ಒತ್ತಾಯವಿದ್ದಾಗ್ಯೂ ಸರ್ಕಾರ ಈವರೆಗೆ ಕ್ರಮ ಕೈಗೊಂಡಿರುವುದಿಲ್ಲ. ಮಾನ್ಯ ಮೀನುಗಾರಿಕೆ ಸಚಿವರು ನಿಜವಾಗಲೂ ತುಂಬಾ ಉತ್ಸಾಹದಿಂದ ಕಾರ್ಯಪ್ರವೃತ್ತರಾದರೂ ಯಾವ ಕಾರಣದಿಂದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಇಷ್ಟೊಂದು ತಡವಾಗುತ್ತದೆಂದು ಗೊತ್ತಾಗುವುದಿಲ್ಲ. ಉದಾಹರಣೆಗೆ ಹಲವಾರು ವರ್ಷಗಳ ಬೇಡಿಕೆಯಾದ ಡ್ರೇಜರ್ ಖರೀದಿಸುವ ಕಾರ್ಯಕ್ರಮ ಮಾಡುವುದು ಉತ್ತಮ. ಬಹುಶಃ ಈ ಸಮಸ್ಯೆಯ ಭಯಾನಕತೆಯ ಕಿಂಚಿತ್ ಅರಿವು ಕೂಡ ಇಲ್ಲದ ರೀತಿಯಲ್ಲಿ ಇಲಾಖೆಯ ಕೆಲವರು ವರ್ತಿಸುತ್ತಿದ್ದಾರೆ. ಇಡೀ ಮತ್ಸ್ಯೋದ್ಯಮವನ್ನೇ ಕಾಲಾಂತರದಲ್ಲಿ ವಿನಾಶದ ಅಂಚಿಗೆ ಒಯ್ಯಬಹುದಾದ ಅಪಾಯ ಸರ್ಕಾರದ ನಿಧಾನ ನೀತಿಯ ಪರಿಣಾಮವಾಗಿ ಆಗುವ ಎಲ್ಲ ಸಾಧ್ಯತೆಗಳಿವೆ. ಆದ್ದರಿಂದ ಹೂಳೆತ್ತುವಿಕೆಯನ್ನು ಸಮರೋಪಾದಿಯಲ್ಲಿ ಕೈಗೊಂಡು ಕರಾವಳಿಯ ಮೀನುಗಾರರ ರಕ್ಷಣೆಗೆ ಮುಂದಾಗುತ್ತದೆಂದು ಆಶಿಸುತ್ತಾ ಈ ಕುರಿತು ನಿರ್ದಿಷ್ಟ ಉತ್ತರವನ್ನು ಅಂಕಿ ಅಂಶಗಳ ಸಹಿತ ನೀಡಬೇಕೆಂದು ಮಾನ್ಯ ಮೀನುಗಾರಿಕೆ ರಾಜ್ಯ ಸಚಿವರನ್ನು ಆಗ್ರಹಿಸುತ್ತೇನೆ.

ಶ್ರೀ ಎ.ಎಂ.ಬೆಳ್ಳಿಯಪ್ಪ:-(ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು);- ಮಾನ್ಯ ಅಧ್ಯಕ್ಷರೆ, ಹಳೇ ಮಂಗಳೂರು ಬಂದರು, ಮಾಣಿಜ್ಯ ಹಾಗೂ ಮೀನುಗಾರಿಕಾ ಬಂದರು ಆಗಿದ್ದು, ಈ ಬಂದರಿನಲ್ಲಿ ಹೂಳೆತ್ತುವ ಬಗ್ಗೆ ನೌಕೋದ್ಯಮಿಗಳಿಂದ ಹಾಗೂ ಸ್ಥಳೀಯ ಮೀನುಗಾರ ಮುಖಂಡರಿಂದ ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಮೇಲಿಂದ ಮೇಲೆ ಒತ್ತಾಯಿಸಿದ್ದರ ಪರಿಣಾಮವಾಗಿ ಸರ್ಕಾರವು ಮಂಗಳೂರು ಹಳೇ ಬಂದರು ಅಳಿವೆ ಬಾಗಿಲಿನಲ್ಲಿ ಹೂಳೆತ್ತಲು ಅನುಮತಿ ನೀಡಿತು. ಕರೆದ ಟೆಂಡರಿಗೆ ಪ್ರತಿಯಾಗಿ ಕೇಂದ್ರಸರ್ಕಾರದ ಸಂಸ್ಥೆಯಾದ ಮೆ.ಡಿ.ಸಿ.ಐ.ವಿಶಾಖಪಟ್ಟಣಂ ಇವರು ಏಕೈಕ ಟೆಂಡರನ್ನು ಸಲ್ಲಿಸಿದ್ದು ಟೆಂಡರನ್ನು ಪರಿಶೀಲಿಸಿ ಸರಕಾರದ ಆದೇಶದಂತೆ ಮೆ.ಡಿ.ಸಿ.ಐ. ನವರಿಗೆ ಹೂಳೆತ್ತುವ ಕಾರ್ಯವನ್ನು ವಹಿಸಿ ಕೊಡಲಾಯಿತು. ಮೆ.ಡ್ರೆಜ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ದಿ : 27-11-89 ರಂದು ಹಳೇ ಮಂಗಳೂರು ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕಾರ್ಯವನ್ನು ಸುಧಾರಿತ ಬೆಡ್ ಲೆವೆಲರ್ ಮೂಲಕ ಕೈಗೆತ್ತಿಕೊಂಡರೂ ದಿನಾಂಕ: 28-11-89 ರಂದು ಹೂಳೆತ್ತುವ ಕಾರ್ಯ ಮುಗಿಸಿ ಹಿಂತಿರುಗುವಾಗ ಯಂತ್ರವನ್ನು ಜಗ್ಗುತ್ತಿದ್ದ ನಾವೆಯು ಸಮುದ್ರದಲ್ಲಿ ಮುಳುಗಿ ಅಪಾಯ ಸಂಭವಿಸಿತ್ತು.